ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (417) 330 |
| ಸದಸ್ಯರ ಹೆಸರು | ಡಾ॥ವೈ.ಎ.ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 23.09.2020 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಹೊಂಡ ಯೋಜನೆ ಸ್ಥಗಿತಗೊಂಡಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ : | 2020-21 ನೇ ಸಾಲಿಗೆ ಕೃಷಿ ಭಾಗ್ಯ ಯೋಜನೆಯನ್ನು ಮುಂದುವರೆಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ರೂ. 40.00 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಸದರಿ ಅನುದಾನವನ್ನು ಕಳೆದ ಸಾಲಿನಲ್ಲಿ ಯೋಜನೆಯ ಮಾರ್ಗಸೂಚಿಯನ್ವಯ ಈಗಾಗಲೇ ಅನುಷ್ಠಾನ ಮಾಡಿರುವ ಘಟಕಗಳಿಗೆ ಮಾತ್ರ ಬಾಕಿ ಸಹಾಯಧನ ಪಾವತಿಸಲು ನಿಗಧಿಯಾಗಿರುತ್ತದೆ. |
| ಆ) | ಬಂದಿದಲ್ಲಿ ಇದರಿಂದ ರೈತರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ಈ ಯೋಜನೆ ನಿಲ್ಲಿಸಲು ಕಾರಣಗಳೇನು; | ಅನ್ವಯಿಸುವುದಿಲ್ಲ |
| ಇ) | ಈ ಯೋಜನೆಯನ್ನು ಪುನ: ಜಾರಿಗೊಳಿಸಲು ಸರ್ಕಾರ ಯೋಜಿಸಿದೆಯೇ; ಹಾಗಿದಲ್ಲಿ ಯಾವ ದಿನಾಂಕದಿಂದ ಈ ಯೋಜನೆ ಮತ್ತೆ ಜಾರಿಗೊಳ್ಳಲಿದೆ; (ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ |

**ಸಂಖ್ಯೆ: AGRI-AML/163/ 2020**

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಚರ್ಚಿಸಿ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಲು ಮತ್ತು ಉಸ್ತುವಾರಿ ಪ್ರಗತಿ ಪರಿಶೀಲನ ಮಾಡಲು ಅನುವಾಗುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ಹಾಗೂ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಿ ಸರ್ಕಾರದ ಆದೇಶ ಸಂಖ್ಯೆ: ಕೃಇ 30 ಕೃರಾಗೋ 2019 ದಿನಾಂಕ:18.02.2019ರಂದು ಆದೇಶ ಹೊರಡಿಸಲಾಗಿದೆ.<br><br>ರಾಜ್ಯ ಮಟ್ಟದ ಸಮಿತಿಯು ದಿನಾಂಕ:21.01.2020ರಂದು ಆಹಾರ ಪಾರ್ಕುಗಳ ಪ್ರವರ್ತಕರುಗಳು ಮತ್ತು ರಾಜ್ಯಮಟ್ಟದ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿ ವಿವಿಧ ಇಲಾಖೆಗಳ ವತಿಯಿಂದ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳ ಕುರಿತು ಸುಧೀರ್ಗವಾಗಿ ಚರ್ಚಿಸಿದೆ.<br><br>ಅದರಂತೆ ವಿವಿಧ ಇಲಾಖೆಗಳ ಕಾರ್ಯದರ್ಶಿಗಳಿಗೆ, ಕೃಷಿ ಇಲಾಖೆಯ ಕಾರ್ಯದರ್ಶಿ ರವರಿಂದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಲೋಕೋಪಯೋಗಿ, ಜಲಸಂಪನ್ಮೂಲ ಇಲಾಖೆ ಹಾಗೂ ಇಂಧನ ಇಲಾಖೆ ಗಳಿಂದ ಅನುಷ್ಠಾನ ಮಾಡಬೇಕಾದ ಕ್ರಮಗಳ ಕುರಿತು ಕ್ರಮ ಕೈಗೊಳ್ಳಲು ಕೋರಿ ಪತ್ರವ್ಯವಹಾರ ಮಾಡಲಾಗಿದೆ.<br><br>ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 03.07.2020 ರಂದು ಆಹಾರ ಪಾರ್ಕುಗಳಲ್ಲಿನ ಸಮಸ್ಯೆಗಳನ್ನು ಅವಲೋಕಿಸಿಲು ಸಭೆ ನಡೆಸಲಾಗಿರುತ್ತದೆ.<br><br>ಮಾನ್ಯ ಕೃಷಿ ಸಚಿವರು ಹಿರಿಯೂರು, ಮಾಲೂರು ಮತ್ತು ಜೇವರ್ಗಿಯಲ್ಲಿ ಸ್ಥಾಪಿತಗೊಂಡಿರುವ ಆಹಾರ ಪಾರ್ಕುಗಳನ್ನು ಖುದ್ದಾಗಿ ಭೇಟಿ ನೀಡಿ, ಪರಿಶೀಲನೆ ಕೈಗೊಂಡಿರುತ್ತಾರೆ. |

**ಸಂಖ್ಯೆ: ಕೃಇ/107/ಕೃಕೈಲ/2020**

(ಬಿ.ಸಿ.ಪಾಟೀಲ್)
ಕೃಷಿ ಸಚಿವರು